ಇಂದು ದಿನಾಂಕಃ 20.09.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಎದುರುದಾರರ ಪರ ಶ್ರೀ ಯು ಡಿ ಡಿ ವಕೀಲರಿಂದಃ

1. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರಿಕೆಯ ವಿಷಯಗಳು ಗೊತ್ತಿರುತ್ತದೆ. ಓ ಎಸ್ ನಂ. 313/2010 ರ ಆದೇಶದ ಹಾಳೆಗಳ ವಿವರಗಳನ್ನು ತಿಳಿದುಕೊಂಡಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರಿಕೆಯಲ್ಲಿ ಹೇಳಿರು ಹಾಗೆ ಅರ್ಜಿದಾರರಿಗೆ ಅನೇಕ ಬಾರಿ ಸಾಕ್ಷ ಹೇಳಲು ಅವಕಾಶಗಳನ್ನು ಕೊಟ್ಟರು ಸಹ ಮತ್ತು ಕಾಸ್ಟನ್ನು ಹಾಕಿದರು ಸಹ ಅವರು ಕೇಸನ್ನು ವಿಚಾರಣೆ ಮಾಡಿಲ್ಲವಾದ್ದರಿಂದ ದಿಃ 19-12-2015 ರಂದು ಅವರ ದಾವಾವನ್ನು ವಜಾ ಮಾಡಿದ್ದಾರೆ ಎಂದು ನ್ಯಾಯಾಲಯದ ಆದೇಶ ಪ್ರತಿಯನ್ನು ಓದಿ ತಿಳಿದುಕೊಂಡಿರುತ್ತೇನೆ. ದಿಃ 20-04-2015 ರಂದು ನನ್ನ ಪರ ವಕೀಲರು ಮಧ್ಯಂತರ ಅರ್ಜಿ ನಂ.3 ರನ್ನು ಸಲ್ಲಿಸಿ 35 ದಾಖಲಾತಿಗಳನ್ನು ಹಾಜರು ಪಡಿಸಿ ಪಿ ಡಬ್ಲು-1 ರವರನ್ನು ಪಾಟೀ ಸವಾಲು ಮಾಡಲು ಸಮಯವನ್ನು ಕೋರಿದ್ದರು ಎಂದರೆ ಸರಿ. ಸದರಿ ಮಧ್ಯಂತರ ಅರ್ಜಿಗೆ ಈ ಪ್ರಸ್ತುತ ಅರ್ಜಿದಾರರ ವಕೀಲರು ದಿಃ 10-06-2015 ರಂದು ತಕರಾರನ್ನು ಸಲ್ಲಿಸಿದ್ದರು ಎಂದರೆ ನನಗೆ ನೆನಪಿಲ್ಲ.

2. ಸದರಿ ಮಂಧ್ಯಂತರ ಅರ್ಜಿಯನ್ನು ನ್ಯಾಯಾಲಯವು ಆಲಿಸಿ ಆದೇಶಕ್ಕಾಗಿ ದಿಃ 22-07-2015 ಕ್ಕೆ ಮುಂದೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಂದು ಅರ್ಜಿಯ ಆದೇಶಕ್ಕಾಗಿ ಇದುದ್ದರಿಂದ ವಾದಿಯರು ಹಾಜರು ಇರಲಿಲ್ಲ ಎಂದರೆ ಸಾಕ್ಷಿಯು ನಾನು ಹಾಜರು ಇದ್ದೆ, ವಾದಿಯರು ಹಾಜರು ಇರಲಿಲ್ಲ ಎಂದು ನುಡಿಯುತ್ತಾರೆ. ದಿಃ 22-07-2015 ರಂದು ಆದೇಶಕ್ಕಾಗಿ ಕಾಯ್ದಿರಿಸಿದ್ದ ದಿನಾಂಕದಂದು ನಮ್ಮ ವಕೀಲರು ಹಾಜರು ಮಾಡಿದ ಮೆಮೋದ ಪ್ರತಿಯನ್ನು ಪ್ರಸ್ತುತ ಅರ್ಜಿದಾರರಿಗಾಗಲಿ ಅಥವಾ ಇನ್ನು ಉಳಿದ ವಾದಿಯರಿಗಾಗಲಿ ನೀಡಿರುವುದಿಲ್ಲ ಎಂದರೆ ನನಗೆ ನೆನಪಿಲ್ಲ. ದಿಃ 19-08-2015 ರಂದು ಓ ಎಸ್ 313/2010 ರಲ್ಲಿ ನಜಾರಸಾಬ ಅಬ್ದುಲ್ ಸಾಬ ಹುಬ್ಬಳ್ಳಿ ಇವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡುವ ಪೂರ್ವದಲ್ಲಿ ಸದರಿ ಕೇಸ್‌ನ 3 ನೇ ಪ್ರತಿವಾದಿಯಾದ ಇಸ್ಮಾಲ್‌ಸಾಬ ಚಮನಸಾಬ್ ಯಲ್ಲಾಪುರ ಇವರು

ತೀರಿಹೋಗಿದ್ದಾರೆ ಎಂದು ಮರಣ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

3. ಇಸ್ಮಾಲ್ ಸಾಬ್ ಚಮನಸಾಬ್ ಇವರು ವಾರಸುದಾರರುಏಲ್ಲಿ ಇದ್ದಾರೆ ಎಂದು ಮತ್ತು ಅವರ ಬಗ್ಗೆ ಮಾಹಿತಿ ಇಲ್ಲವಾದ್ದರಿಂದ ವಾದಿಯರು ದಿಃ 19-12-2015 ರಂದು ಹಾಜರಿದ್ದು ಸಮಯವನ್ನು ಕೋರಿಸುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿಯು ಮುಂದುವರೆದು ಸದರಿಯವರ ವಾರಸುದಾರರು ಬ್ಯಾಡಗಿಯಲ್ಲಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರ ವಾರಸುದಾರರು ಬ್ಯಾಡಗಿಯಲ್ಲಿ ಇರುವ ಅಡ್ರೇಸ್‌ಗೆ ನೋಟಿಸ್ ಹೋದಾಗ ನ್ಯಾಯಾಲಯದ ಬೇಲಿಫ ರವರು ಬ್ಯಾಡಗಿ ವಿಳಾಸದಲ್ಲಿ ಇರುವುದಿಲ್ಲ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದು ಹಿಂಬರಹವನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಎದುರುದಾರರ ನಂ. 3 ಇ ರವರು ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಮೃತ ಇಸ್ಮಾಲ್ ಸಾಬ ಅವರಿಗೂ ಅರ್ಜಿದಾರರಿಗೂ ಯಾವುದೇ ಸಂಬಂಧವಿರುವುದಿಲ್ಲ. ಸದರಿಯವರು ಸಂಬಂಧಿಕರಲ್ಲವಾದ್ದರಿಂದ ಅವರು ವಾರಸುದಾರರ ವಿಳಾಸಗಳನ್ನು ಹುಡುಕುವುದು ಕಷ್ಟ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ದಾವೆಯನ್ನು ವಜಾ ಮಾಡುವ ದಿನದಂದು ಏಲ್ಲಾ ವಾದಿಯ ಪರವಾಗಿ 3 ನೇ ವಾದಿಯು ಹಾಜರು ಇದ್ದು ಮೃತ ಪಟ್ಟ ವ್ಯಕ್ತಿಯ ವಾರಸುದಾರರಿಗೆ ನೋಟಿಸ್ ನ್ನು ತೆಗೆದುಕೊಳ್ಳಲು ಕಾಲಾವಕಾಶ ಕೇಳಿದ್ದರು ಸಹ ನ್ಯಾಯಾಲಯವು ವಜಾ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿಯ ವಾರಸಾದಾರರು ಬಗ್ಗೆ ಮಾಹಿತಿ ಇಲ್ಲವಾದ್ದರಿಂದ ಸೂಕ್ತ ನೋಟಿಸ್ ಗಳನ್ನು ತೆಗೆದುಕೊಳ್ಳದೆ ಆಗಿದೆ ಇರುವುದರಿಂದ ಅರ್ಜಿದಾರರಿಂದ ಯಾವುದೇ ಬುದ್ದಿ ಪೂರ್ಕ ತಪ್ಪುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

4. ಅರ್ಜಿದಾರರಿಗೆ ಮೃತ ಇಸ್ಮಾಲ್ ಸಾಬ್ ರ ವಾರಸುದಾರರ ಬಗ್ಗೆ ಮಾಹಿತಿ ಇಲ್ಲದಿರುದರಿಂದ ಹಾಗೂ ಅವರ ಮೇಲೆ ಸೂಕ್ತ ಅರ್ಜಿ ಸಲ್ಲಿಸಿ ನೋಟಿಸ್‌ನ್ನು ತೆಗೆದುಕೊಳ್ಳಲಾಗಿರುವುದಿಲ್ಲ ಹಾಗಾಗಿ ಅರ್ಜಿದಾರರಿಂದ ಕೇಸ್ ನ್ನು ಮುಂದುವರೆಸುವುದರಲ್ಲಿ ಯಾವುದೇ ತಪ್ಪು ಆಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-xxx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.